ಶ್ರೀ ಎಂ. ಸಿ. ಬಸಪ್ಪ.—ಮಾನ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಪೊಟ್ಟೆ ಮಾಡತಕ್ಕವರಿಗೆ ಫ್ಯಾಬ್ರಿನ್ ಇದೆ ಎಂದು ಗೊತ್ತಾದರೆ ಡಿಪೀಸ್ಡ್ ಫೀ ಮಾಡುತ್ತಾರೆ. ಇದನ್ನು ಮಾಸಗಿಯವರೂ ಮಾಡ ಬೇಕಾಗುತ್ತದೆ. ಈ ದೃಷ್ಟಿಯಿಂದ ಹಿಂದೆ ಏಡೆಡ್ ಗ್ರಾನ್ಯೂಲ್ಸ್‌ಗೆ ಬೋನಸ್ ಕೊಡುತ್ತಾ ಇದ್ದರು. ಈಗ ಅದನ್ನು ನಿಲ್ಲಿಸಿದ್ದಾರೆ. ಆದುದರಿಂದ ಹಿಂದಿನಿಂದ ಮಾಡಿಕೊಂಡು ಬಂದಿರತಕ್ಕ ಗ್ರಾನ್ಯೂಲ್ಸ್‌ಗೆ ಇನ್ ಸೆಂಟೀವ್ ಕೊಟ್ಟು ಡಿಪೀಸ್ಡ್ ಫೀ ಲೆಯಿಂಗ್ಸ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಬಿ. ಶಿವಯ್ಯ.—ಅದನ್ನು ಕನ್ಸಿಡರ್ ಮಾಡುತ್ತೇನೆ.

Disease affected to Arecanut Gardens in Koppa—Sringeri and Thirthahalli.

797. SRI KADIDAL DIVAKAR (Thirthalli).—Will the Minister for Sericulture and Horticulture be pleased to state :—

(a) whether it has come to the notice of the Government that the arecanut gardens are affected by yellow leaf disease in Koppa, Sringeri, Thirthahalli and Hosanagar areas ;

(b) the extent of damage caused so far due to the said disease ;

(c) whether it has come to the notice of the Government that the areca crop were severely damaged during 1978 due to "KOLEROGA" in view of heavy rainfall and thereby the ryots were put to great loss ;

(d) if so, the amount of loss sustained by the ryots ;

(e) the nature of help or compensation that would be provided by the Government to such of the ryots who have sustained loss ?

SRI K.B. SHIVAIAH (Minister for Sericulture and Horticulture).—

(a) The arecanut gardens in Koppa and Sringeri Taluks were affected by yellow leaf disease. But, it is learnt that this disease has not spread in Thirthalli and Hosanagar.

(b) The loss estimated is Rs. 32 87 800 due to damage caused to 65,756 arecanut plants in KOPPA Taluk and the loss estimated is Rs. 6,73,500 due to damage caused to 13,480 plants in Sringeri Taluk.

(The details are placed on the Table of the House).**

(c) Yes.

** Copy placed in the Karnataka Legislature Library vide No 36/date 16-5-1979.

(d) The details are as follows :—

	Taluk		Acres approximately	Loss approximately
			Rs.	Rs.
(1)	Koppa	...	2,530	39,15 00
(2)	Sringeri	...	2,375	3,56, 00
(3)	Hosanagar	...	339	1,86,000
(4)	Thirthalli	...	1,853	20,38,000

(e) Suitable Technic l suggestions for controlling the said disease are being given by the Departmental authorities to the ryots, who have been affected due to the said diseases.

ಶ್ರೀ ಕಡಿದಾಳ್ ದಿವಾಕರ್.—ಮಂತ್ರಿಗಳು ತಮ್ಮ ಉತ್ತರದಲ್ಲಿ ತೀರ್ಥಹಳ್ಳಿ ತಾಲ್ಲೂಕು ಮತ್ತು ಹೊಸನಗರ ತಾಲ್ಲೂಕುಗಳಲ್ಲಿ ಅಡಿಕೆ ತೋಟಕ್ಕೆ ಹಳದಿ ಎಲೆ ರೋಗ ಬಂದಿದ್ದು ಗೊತ್ತಿಲ್ಲ, ಕೊಪ್ಪ ಮತ್ತು ಶೃಂಗೇರಿ ಭಾಗದಲ್ಲಿ ಬಂದಿರುವುದು ಗೊತ್ತಿದೆ ಎಂದು ಹೇಳಿದ್ದಾರೆ. ಈ ರೋಗ ಯಾವರೀತಿಯಿಂದ ಬಂದಿದೆ ಎನ್ನುವುದನ್ನು ಕಂಡುಹಿಡಿದ್ದಿರಾ, ಈ ರೋಗ ಏಕೆ ಬರುತ್ತದೆ ಎನ್ನುವುದು ತಮಗೆ ಗೊತ್ತಿದೆಯೇ ಮತ್ತೆ ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕುಗಳಲ್ಲಿ ಈ ರೋಗ ಬಂದಿರುವುದು ತಮ್ಮ ಗಮನಕ್ಕೆ ಏಕೆ ಬಂದಿಲ್ಲ ?

ಶ್ರೀ ಕೆ. ಬಿ. ಶಿವಮ್ಮ —ಸುಮಾರು ೩೦ ವರ್ಷಗಳಿಂದ ಈ ರೋಗ ಇದೆ. ಮಳೆ ಎಲ್ಲಿ ಜಾಸ್ತಿಯಾಗುತ್ತದೆ ಅಲ್ಲಿ ಈ ರೋಗದ ಉಲ್ಬಣ ಜಾಸ್ತಿಯಾಗುತ್ತದೆ. ನಿನ್ನೆ ಕೂಡ ಇದನ್ನು ಹೇಳಿದ್ದೇನೆ. ಹೋದ ಸಾರಿ ಮೇ ತಿಂಗಳಲ್ಲಿ ವಿಪರೀತ ಮಳೆ ಮಲೆನಾಡು ಏರಿಯಾನಲ್ಲಿ ಶುರುವಾಯಿತು. ಆಗ ಈ ರೋಗದ ಜಾಸ್ತಿಯಾಯಿತು. ಇದನ್ನು ತಡೆಗಟ್ಟಲಿಕ್ಕೆ ಔಷಧಿಗಳನ್ನು ಸಿಂಪರಣೆ ಮಾಡಬೇಕು ಎಂದರೆ ಅದಕ್ಕೂ ಅವಕಾಶ ಕೊಡದ ರೀತಿಯಲ್ಲಿ ಮಳೆಯಾಯಿತು. ಹೋದ ಸಾರಿ ಈ ರೋಗ ಉಲ್ಬಣವಾಗಿದ್ದು ಜನಗಳ ಕಣ್ಣಿಗೆ ಬಂದಿದ್ದು, ಹಾನಿ ಮಾಡಿದೆ. ಜನಗಳಿಗೆ ತೊಂದರೆ ಮಾಡಿದೆ ಎನ್ನುವುದು ಸರ್ಕಾರಕ್ಕೆ ಗೊತ್ತಿದೆ.

ಶ್ರೀ ಕಡಿದಾಳ್ ದಿವಾಕರ್.—ಕೊಳೆ ಡಿಸೀಸ್ ಹೆಚ್ಚಿಗೆ ಮಳೆಯಾದರೆ ಬರುತ್ತದೆ. ಎಲ್ಲೋ ಡಿಸೀಸ್ ಮಳೆ ಜಾಸ್ತಿಯಾದರೆ ಖಂಡಿತ ಬರುವುದಿಲ್ಲ. ಯಾರಾದರೂ ಟೆಕ್ನಿಕಲ್ ಪೀಪಲ್ಸ್ ಆ ರೀತಿ ಹೇಳಿದ್ದರೆ ತಪ್ಪಾಗುತ್ತದೆ. ಇದನ್ನು ಪುನರ್ವಿಮರ್ಶೆ ಮಾಡಿಸಬೇಕು. ಮಳೆ ಜಾಸ್ತಿಯಾದರೆ ಬರುವುದು ಕೊಳೆ ಡಿಸೀಸ್. ಎಲ್ಲೋ ಡಿಸೀಸ್ ಯಾವರೀತಿ ಬರುತ್ತದೋ ಗೊತ್ತಿಲ್ಲ. ಇದಕ್ಕೆ ಬೆಂಕಿ ರೋಗ ಎಂದು ಕೂಡ ಹೇಳ್ತಾರೆ. ಇದರಿಂದ ಅಡಿಕೆ ತೋಟ ಸಂಪೂರ್ಣವಾಗಿ ನಾಶವಾಗುವುದರೊಳಗೆ ತಾವು ರೀಸರ್ಚ್ ಮಾಡಿಸಿ, ಅದನ್ನು ಕಂಟ್ರೋಲ್ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಬಿ. ಶಿವಮ್ಮ.—ಟ್ರೀಟ್‌ಮೆಂಟ್‌ಗೆ ಸಿ.ಪಿ.ಸಿ.ಆರ್.ಐ. ಅವರು ಇದರ ಬಗ್ಗೆ ಸಜೆಸ್ಟ್ ಮಾಡಿದ್ದಾರೆ, ನಮ್ಮ ಡಿಪಾರ್ಟ್‌ಮೆಂಟ್ ಏನಲ್ಲ. Application of lime, liberal application of bulk mechanical manures, application of fertilisers at the rate of 100 kms nitrogen. ಈ ಮೆಥೆಡ್‌ಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ನಮ್ಮ ಇಲಾಖೆಯವರು ಕ್ರಮ ತೆಗೆದುಕೊಂಡಿದ್ದಾರೆ. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಎಲ್ಲೋ ಲೀಫ್ ರೋಗ It has not been notified ಎಂದು ನಮ್ಮ ಗಮನಕ್ಕೆ ಬಂದಿದೆ.

ಶ್ರೀ ಕಡಿದಾಳ್ ದಿವಾಕರ್.—ತಮ್ಮ ಗಮನಕ್ಕೆ ಬಂದಿಲ್ಲ. ತಮ್ಮ ಅಧಿಕಾರಿಗಳ ಗಮನಕ್ಕೆ ಬಂದಿಲ್ಲ, ಇದರಿಂದ ರೈತರಿಗೆ ತೊಂದರೆಯಾಗಿದೆ. ಕೊಪ್ಪ ತಾಲ್ಲೂಕಿನಲ್ಲಿ ೩೨೮೨,೮೦೦ ರೂಪಾಯಿಗಳು ಈ ರೋಗದಿಂದ ನಷ್ಟವಾಗಿದೆ ಮತ್ತು ಶೃಂಗೇರಿ ತಾಲ್ಲೂಕಿನಲ್ಲಿ ೬,೭೩,೫೦೦ ರೂಪಾಯಿಗಳು ನಷ್ಟವಾಗಿದೆ ಯೆಂದು ಹೇಳಿದ್ದೀರಿ. ನಷ್ಟ ಹೊಂದಿದ ತೋಟಗಳನ್ನು ಪುನರ್ನಿರ್ಮಾಣ ಮಾಡಲಿಕ್ಕೆ ಸಾಲ ಕೊಡುತ್ತೀರಾ ಅಥವಾ ಬೇರೆ ರೀತಿಯಲ್ಲಿ ವ್ಯವಸ್ಥೆ ಮಾಡುತ್ತೀರಾ? ಮತ್ತೆ ರೆವಿನ್ಯೂ ಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಕಂದಾಯವನ್ನು ವೇವ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರಾ ಮತ್ತು ಅಲ್ಪಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಪರಿವರ್ತನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಕೆ. ಬಿ. ಶಿವಯ್ಯ.—ಈಗಾಗಲೇ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಇದರ ಬಗ್ಗೆ ಕ್ರಮ ತೆಗೆದು ಕೊಳ್ಳಲಿಕ್ಕೆ ತಿಳಿಸಿದ್ದೇವೆ ಅವರು ಸರ್ವೆ ಮಾಡಿ ಯಾರ್ಯಾರಿಗೆ ಯಾದ ಯಾವ ರೀತಿಯಲ್ಲಿ ಸಹಾಯ ಮಾಡಬೇಕು ಎನ್ನುವುದರ ಬಗ್ಗೆ ವಿಚಾರಣೆ ಮಾಡುತ್ತಿದ್ದಾರೆ. ಒಂದು ಎಕರೆ ಒಳಗಿರತಕ್ಕ ರೈತರಿಗೆ ೫೦೦ ರೂಪಾಯಿ ಪರ್ ಏಕರ್ ಕೊಡಬೇಕು ಎಂದು ಮಾಡಿದ್ದೇವೆ ೪-೫-೬ ಎಕರೆ ಇರತಕ್ಕ ರೈತರಿಗೆ ಇನ್‌ಕಂಟ್ಯಾಕ್ಸ್ ಮನ್ನಾ ಮಾಡಬೇಕು ಎಂದು ಮಾಡಿದ್ದೇವೆ ಲಾಸ್ ಷಿಫ್/ಷಿ ಕ್ಕಿಂತ ಜಾಸ್ತಿ ಇದ್ದಾಗ ಸಸ್ಪೆನ್ಷನ್ ಆಫ್ ಲ್ಯಾಂಡ್ ರೆವಿನ್ಯು ಆಗಲೀ, ಅಲ್ಪಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಲೀ ಮಾಡಿಸುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ನಮ್ಮ ಇಲಾಖೆಯ ತಜ್ಞರುಗಳನ್ನು ಕಳಿಸಿ ಎಲ್ಲಾ ರೀತಿಯಿಂದಲೂ ರೋಗವನ್ನು ತಡಗಟ್ಟಲಿಕ್ಕೆ ಏನು ಸಹಾಯ ಮಾಡಬೇಕೋ ಅದನ್ನು ಮಾಡಿಸುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ಅದಕ್ಕೆ ಬೇಕಾದಂಥ ಔಷಧಿ ಮೈಲುತುತ್ತ, ಅದು ಮಾರ್ಕೆಟ್‌ನಲ್ಲಿ ಸಿಗುತ್ತಿಲ್ಲ. ಹೋದ ವರ್ಷ ೧೧ ರೂಪಾಯಿಗಳು ಇದ್ದದ್ದು ಈ ವರ್ಷ ೧೪ ರೂಪಾಯಿಗಳು ಆಗಿದೆ. ಆಗ್ಗದ ದರದಲ್ಲಿ ಸಾಕಷ್ಟು ಪ್ರಮಾಣದಲ್ಲಿ ನಿಮ್ಮ ಸಹಕಾರ ಸಂಘಗಳ ಮುಖಾಂತರ ಈ ಔಷಧಿ ಬೆಳೆಗಾರರಿಗೆ ಒದಗಿಸುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ಸ್ವಾಮಿ.

ಶ್ರೀ ಕೆ. ಬಿ. ಶಿವಯ್ಯ.—ಅದು ಆಗಬಹುದು.

ಶ್ರೀ ಕಡಿದಾಳ್ ದಿವಾಕರ್.—ಈ ಹುಳುಗಳ ಬಗ್ಗೆ ಯೂನಿವರ್ಸಿಟಿಯವರು ರಿಸರ್ಚ್ ಸ್ಟೇಷನ್ ನಡೆಸುತ್ತಿದ್ದಾರೆ, ಮಧ್ಯದಲ್ಲಿ ಯಾವುದೋ ಕಾರಣದಿಂದ ಅದು ನಿಂತು ಹೋಗಿದೆ. ಇವತ್ತು ಏನಾದರೂ ರೋಗ ಬಂತು ಎಂದರೆ ವಿಟ್ಲಕ್ಕೋ, ಇಲ್ಲ ಕಾಸರಗೋಡಿಗೋ ಹೋಗ ಬೇಕಾಗಿದೆ ಆದುದರಿಂದ ತೀರ್ಥಹಳ್ಳಿಯಲ್ಲಿ ಒಂದು ರಿಸರ್ಚ್ ಸ್ಟೇಷನ್ ಮಾಡಿ ಸ್ಥಳದಲ್ಲಿಯೇ ಪರೀಕ್ಷೆ ಮಾಡುವುದಕ್ಕೆ ಪ್ರಾವಿಜನ್ ಮಾಡುತ್ತೀರಾ ಸ್ವಾಮಿ?

ಶ್ರೀ ಕೆ. ಬಿ ಶಿವಯ್ಯ.—ನಾನು ನಿನ್ನೆ ಒಂದು ಪ್ರಶ್ನೆಗೆ ಉತ್ತರಕೊಡುತ್ತಾ ಹೇಳಿದ್ದೇನೆ ಪ್ರತಿಯೊಂದು ಜಿಲ್ಲೆಯಲ್ಲೂ ಒಂದೊಂದು ಪ್ಲಾಂಟೇಷನ್ ಪ್ರೊಟೆಕ್ಷನ್ ಸಲ್ ಮಾಡಬೇಕು ತನ್ಮೂಲಕ ಅತಿ ಶೀಘ್ರವಾಗಿ ಏನೊಂದು ಸಲಕರಣೆಗಳು ಮತ್ತು ಪರಿಹಾರ ಕ್ರಮ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಎಲ್ಲಾ ಜಿಲ್ಲೆಗಳಲ್ಲೂ ಅದನ್ನು ಸ್ಥಾಪನೆ ಮಾಡಬೇಕೆಂದು ಮಾಡಿದ್ದೇವೆ. ತನ್ಮೂಲಕ ಪರಿಹಾರ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ಬಗ್ಗೆ ಯೋಚನೆ ಮಾಡುತ್ತಿದ್ದೇವೆ.

Foreign Exchange earned by Small Scale and Large Scale Industries

835. SRI ANANDAKUNDA HEGDE (Brahmavara).—Will the Minister for Industries and Commerce be pleased to state:—

(a) the foreign exchange earned annually by the large scale and small scale industries in the State;